**<u>ಅಧಿಕ ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ ನ್ಯಾಯಾಲಯ, ಗುಬ್ಬಿ</u>**

**ಓ ಎಸ್ ನಂ.152/2020 ಪಿ.ಡಬ್ಲ್ಯು: 1**

**<u>ದಿನಾಂಕ: 23.10.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲು: ಪ್ರತಿವಾದಿಗಳ ಪರ ಶ್ರೀ. KCN ವಕೀಲರಿಂದ:</u>**

ಈ ದಾವೆಯನ್ನು ಸಲ್ಲಿಸಲು ನೀಡಿದ ದಾಖಲಾತಿಗಳನ್ನು ನಾನು ಪರಿಶೀಲಿಸಿರುತ್ತೇನೆ. ನಿಪಿ.3 ರಿಂದ 6 ಅನ್ನು 2011 ರಲ್ಲಿ ಪಡೆದುಕೊಂಡಿರುತ್ತೇನೆ. 1 ನೇ ಪ್ರತಿವಾದಿ ದಿ: 11.10.2019 ರಲ್ಲಿ ಸ.ನಂ.78 ಅನ್ನು ಅಳತೆ ಮಾಡಿಸಿಕೊಳ್ಳಲು ಸಂಬಂಧಪಟ್ಟ ಇಲಾಖೆ ಅರ್ಜಿ ನೀಡಿದ್ದರು ಎಂದರೆ ಸರಿ. ಸದರಿ ಅಳತೆಯ ಕಾಲಕ್ಕೆ ಸರ್ವೆ ಅಧಿಕಾರಿಗಳು ಸ.ನಂ.78 1 ಎಕರೆ ಜಮೀನಿನ ಅಕ್ಕಪಕ್ಕದಲ್ಲಿ ಇರುವವರಿಗೆ ಅಳತೆಯ ಬಗ್ಗೆ ನೋಟೀಸ್ ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸರ್ವೆ ಅಧಿಕಾರಿಗಳು ಸದರಿ ನೋಟೀಸನ್ನು ಶಾಲೆಗೆ ನೀಡಿರುತ್ತಾರೆ. ಸದರಿ ನೋಟೀಸನ್ನು ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ಸರ್ವೆ ಅಧಿಕಾರಿಗಳು ಸಿದ್ದಯ, ಗಂಗಮ್ಮ, ವೆಂಕಟಮ್ಮ ಮತ್ತು ವಿಜಯರಾಜು ಎನ್ನುವವರಿಗೆ ನೋಟೀಸ್ ನೀಡಿರುತ್ತಾರೆ ಎಂದರೆ ಸಾಕ್ಷಿ ಸಿದ್ದಯ್ಯ ಎನ್ನುವವರಿಗೆ ಮಾತ್ರ ನೋಟೀಸ್ ನೀಡಿರುತ್ತಾರೆ ಎನ್ನುತ್ತಾರೆ. ನಾವು ಸ.ನಂ.78 ರ ಅಕ್ಕಪಕ್ಕದಲ್ಲಿ ಇಲ್ಲದೇ ಇರುವುದರಿಂದ ನಮ್ಮಗಳಿಗೆ ನೋಟೀಸ್ ನೀಡಿರುವುದಿಲ್ಲ ಎಂದರೆ ಸಾಕ್ಷಿ ನಮ್ಮ ಶಾಲೆಗೆ ನೋಟೀಸ್ ನೀಡಿರುತ್ತಾರೆ ಎನ್ನುತ್ತಾರೆ.

1 ನೇ ಪ್ರತಿವಾದಿಗೆ 85-90 ವರ್ಷ ವಯಸ್ಸಾಗಿರುತ್ತದೆ ಎಂದರೆ ಸರಿ. ಅವರಿಗೆ ಓಡಾಡಲು ಅಗುವುದಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ

ವಯಸ್ಸಾದ್ದರಿಂದ ಅವರ ವರಸುದಾರರು ಸ.ನಂ.78 ರಲ್ಲಿ ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ಸ.ನಂ.78 ರಲ್ಲಿ ನಮ್ಮ ಶಾಲೆ ಇರುತ್ತದೆ ಎನ್ನುತ್ತಾರೆ. ಸ.ನಂ.78 ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲಿ ಇದ್ದು ಬಹಳಷ್ಟು ಬೆಲೆ ಬಾಳುವ ಅಸ್ತಿ ಇರುವುದರಿಂದ ಅದನ್ನು ಲಪಟಾಯಿಸಲು ಈ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಅವಿದ್ಯಾವಂತರಿರುವುದನ್ನು ದುರುಪಯೋಗಪಡಿಸಿಕೊಂಡು ಅವರ ಅಸ್ತಿಯನ್ನು ಲಪಟಾಯಿಸಲು ಈ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ.1 ದಾನ ಪತ್ರವನ್ನು ಬರೆಯುವ ಮುನ್ನಾ ಉಪವಿಭಾಗಧಿಕಾರಿಗಳು, ತುಮಕೂರು ರವರ ಪರವಾನಿಗೆ ಪಡೆದುಕೊಂಡಿರುವ ಬಗ್ಗೆ ನನಗೆ ಗೊತ್ತಿಲ್ಲ. ನಾನು 1ನೇ ವಾದಿ ಸೊಸೈಟಿಯ ಕಾರ್ಯದರ್ಶಿ ಅಗಿರುವುದಿಲ್ಲ ಮತ್ತು 1ನೇ ವಾದಿಯ ಹೆಸರಿನಂತೆ ಯಾವುದೇ ಸೊಸೈಟಿ ಇರುವುದಿಲ್ಲ ಎಂದರೆ ಸರಿಯಲ್ಲ. ಸ.ನಂ.78 1 ಎಕರೆ ಜಮೀನಿಗೂ ನಮಗೂ ಯಾವುದೇ ಸಂಬಂಧ ಇಲ್ಲದೇ ಇದ್ದರು ಅದನ್ನು ಲಪಟಾಯಿಸಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸ.ನಂ.78 ರ ಎಲ್ಲಾ ಕಂದಾಯ ದಾಖಲಾತಿಗಳು ಈಗಲೂ ಸಹ 1ನೇ ಪ್ರತಿವಾದಿ ಮತ್ತು ಅವರ ವರಸುದಾರರ ಹೆಸರಿಗೆ ಇದ್ದು ಅವರುಗಳೇ ಸದರಿ ಜಮೀನಿನ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ. ನಿಪಿ.1 ಉರ್ಜಿತವಾಗಿ ಇಲ್ಲದಿರುವುದರಿಂದ ಅದರ ಮೇರೆಗೆ ಖಾತೆ ಮತ್ತು ಪಹಣಿಯನ್ನು ನಮ್ಮ ವರ್ಗಾವಣೆಯಾಗಿರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಅಧಿಕ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್ ಸಿ , ಗುಬ್ಬಿ.**